# ನೆಲಮಂಗಲ ಯೋಜನಾ ಪ್ರಾಧಿಕಾರ

ದೂರವಾಣಿ : 2772 6222 ಫ್ಯಾಕ್ಸ್ : 2772 6222 E-mail : nelamangala.pa@gmail.com

2ನೇ ಮುಖ್ಯ ರಸ್ತೆ, ಸದಾಶಿವನಗರ, ನೆಲಮಂಗಲ - 562 123, ಬೆಂಗಳೂರು ಗ್ರಾಮಾಂತರ ಜಿಲ್ಲೆ

<u>ಪ್ರಾರಂಭಿಕ ಪ್ರಮಾಣ ಪತ್ರ</u>

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 (2) ರಡಿಯಲ್ಲಿ)

ಸಂಖ್ಯೆ:ನೆಯೋಪ್ರಾ:ಎಲ್‌ಎಓ:40:2018-19 ದಿನಾಂಕ: 18 MAR 2019

ವಿಷಯ: ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅರಿಶಿನಕುಂಟೆ ಗ್ರಾಮದ ಸ.ನಂ.82/9 (ಹಳೇ ಸ.ನಂ.82/5) ರಲ್ಲಿ 1 ಎಕರೆ-01 ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು ನೀಡುವ ಬಗ್ಗೆ.

ಉಲ್ಲೇಖ: 1. ಅರ್ಜಿದಾರರ ಮನವಿ ದಿನಾಂಕ:08-02-2019.

2. ದಿನಾಂಕ:28-02-2019 ರ ಪ್ರಾಧಿಕಾರದ 94ನೇ ಸಭೆಯ ವಿಷಯ ಸಂಖ್ಯೆ:94.5.2 ರ ನಿರ್ಣಯ.

3. ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ ರಶೀದಿ ನಂ.8156 ದಿನಾಂಕ:15-03-2019 ರೂ.1,87,700 /-

4. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/24/ಬೆಂಮಪ್ರ/2015, ದಿನಾಂಕ:10-09-2015.

*************************

ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅರಿಶಿನಕುಂಟೆ ಗ್ರಾಮದ ಸ.ನಂ.82/9 (ಹಳೇ ಸ.ನಂ.82/5) ರಲ್ಲಿ 1 ಎಕರೆ-01 ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಉಲ್ಲೇಖ (1) ರಲ್ಲಿ ಅರ್ಜಿದಾರರು ಕೋರಿದ್ದು, ತಹಸೀಲ್ದಾರ್, ನೆಲಮಂಗಲ ತಾಲ್ಲೂಕು ಅವರಿಂದ ಜಮೀನಿನ ದೃಢೀಕರಿಸಿದ ನಕ್ಷೆ ಹಾಗೂ ವರದಿಯನ್ನು ದಿನಾಂಕ:25-02-2019 ರಂದು ಸ್ವೀಕರಿಸಿದೆ. ಪ್ರಸ್ತಾವನೆಯನ್ನು ಉಲ್ಲೇಖ (2) ರಂತೆ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದ್ದು, ಸದರಿ ಸಭೆಯಲ್ಲಿ ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನವಾಗಿರುತ್ತದೆ. ಪ್ರಾಧಿಕಾರಕ್ಕೆ ಉಲ್ಲೇಖ (3) ರಂತೆ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2) ರಂತೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಉಲ್ಲೇಖ (4) ರನ್ವಯ ಯಾವುದೇ ನಿವೇಶನಗಳನ್ನು ಮಾರಾಟ ಮಾಡಲು ಬಿಡುಗಡೆಗೊಳಿಸದೇ ಕೇವಲ ವಿನ್ಯಾಸವನ್ನು ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ <u>ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ</u> ನೀಡಲಾಗಿದೆ.

18/3

M-viny-lao iss

| ಕ್ರಮ ಸಂಖ್ಯೆ | ಷರತ್ತುಗಳು |
|---|---|
| 1. | ಈಗ ನೀಡಿರುವ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯು ತಾತ್ಕಾಲಿಕವಾಗಿದ್ದು, ವಿನ್ಯಾಸವನ್ನು ಸ್ಥಳದಲ್ಲಿ ಯಥಾವತ್ತಾಗಿ ಅಳವಡಿಸಿ, ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಮಾತ್ರ ನೀಡಲಾಗಿರುತ್ತದೆ. |
| 2. | ಪ್ರಸ್ತಾವಿತ ಜಾಗವು TGR ನ ವಲಯ-1 ರಲ್ಲಿ ಇರುವುದರಿಂದ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಸಂರಕ್ಷಣೆಗಾಗಿ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:FEE:215:ENV:2000 ದಿನಾಂಕ:18-11-2003 ರಲ್ಲಿನ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಹಾಗೂ TGR ನ ವಲಯಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:WP.No-38218/2013 ಮತ್ತು ಇತರೆ ಪ್ರಕರಣಗಳಲ್ಲಿ "ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ" ಒಳಪಟ್ಟಿರುತ್ತದೆ. |
| 3. | ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಸದರಿ ವಸತಿ ವಿನ್ಯಾಸ/ ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ನಿಯಮಗಳನ್ವಯ ಕ್ರಮ ಜರುಗಿಸತಕ್ಕದ್ದು." |
| 4. | ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ ವಿನ್ಯಾಸ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ಈ ವಸತಿ ವಿನ್ಯಾಸ ನಕ್ಷೆಯಲ್ಲಿನ ಯಾವುದೇ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಿರುವುದಿಲ್ಲ. ಹಾಗಾಗಿ ವಿನ್ಯಾಸದಲ್ಲಿನ ನಿವೇಶನಗಳನ್ನು ಮಾರಾಟ ಅಥವಾ ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿರುವ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ. |
| 5. | ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ:ಸಂವ್ಯಶಾಇ/24/ಶಾಸನ/2015, ಬೆಂಗಳೂರು,ದಿನಾಂಕ:10-09-2015 ರಲ್ಲಿ ತಿದ್ದುಪಡಿ ತಂದಿರುವ ಕಾಯ್ದೆಗೆ ಅನುಗುಣವಾಗಿ ವಿನ್ಯಾಸವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮಾತ್ರ ಈ ವಿನ್ಯಾಸವನ್ನು ಅನುಮೋದಿಸಲಾಗಿದ್ದು, ಯಾವುದೇ ನಿವೇಶನಗಳನ್ನು ಮಾರಾಟ ಮಾಡಲು, ಖಾತಾ ಮಾಡಲು ಅಥವಾ ಭೋಗ್ಯ/ ಇತರ ಅಡಮಾನಗಳಿಗೆ ಅವಕಾಶವಿರುವುದಿಲ್ಲ. |
| 6. | ಈ ವಸತಿ ವಿನ್ಯಾಸ ನಕ್ಷೆಯಲ್ಲಿರುವಂತೆಯೇ ನಿವೇಶನಗಳನ್ನು, ರಸ್ತೆಗಳನ್ನು, ಉದ್ಯಾನವನ ಹಾಗೂ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಪ್ರದೇಶಗಳನ್ನು ಸ್ಥಳದಲ್ಲಿ ಯಥಾವತ್ತಾಗಿ ಅಳವಡಿಸುವುದು. |

M-viny-lao iss

18/03

| | |
|---|---|
| | ಉದ್ಯಾನವನ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಪ್ರದೇಶದ ಸುತ್ತಲೂ Chain Linking Fencing ಮಾಡುವುದು. ಬಡಾವಣೆಯಲ್ಲಿ ಡಾಂಬರೀಕೃತ ರಸ್ತೆ, ಮಳೆ ನೀರಿನ ಚರಂಡಿ, ಕಲ್ವರ್ಟ್ಸ್, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸಂಪರ್ಕ ವ್ಯವಸ್ಥೆಗಳನ್ನು ಕಲ್ಪಿಸತಕ್ಕದ್ದು ಹಾಗೂ ವಿನ್ಯಾಸದಲ್ಲಿ ಗುರುತಿಸಲಾಗಿರುವ ಸ್ಥಳದಲ್ಲಿಯೇ ಪ್ರಮಾಣೀಕೃತ ರೀತಿಯಲ್ಲಿ Septic Tank and Soak Pit ಅನ್ನು ನಿರ್ಮಿಸುವುದು ಹಾಗೂ ರಸ್ತೆಯ ಎರಡೂ ಬದಿಗಳಲ್ಲೂ ಸಾಲು ಮರಗಳ ನೆಡುವಿಕೆ ಮುಂತಾದ ಎಲ್ಲಾ ಕಾಮಗಾರಿಗಳೊಂದಿಗೆ ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸತಕ್ಕದ್ದು. ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿರುವ ಬಗ್ಗೆ ಹಾಗೂ ಎಲ್ಲಾ ಕಾಮಗಾರಿಗಳನ್ನು ಮುಗಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರ / ಸಂಸ್ಥೆ / ಇಲಾಖೆಗಳಿಂದ ಪ್ರಮಾಣ ಪತ್ರ / ದೃಢೀಕರಣ ಪತ್ರ / ಮುಕ್ತಾಯ ಪ್ರಮಾಣ ಪತ್ರಗಳನ್ನು ಪಡೆದು ವಿನ್ಯಾಸದ ಅಂತಿಮ ಅನುಮೋದನ ಪಡೆಯತಕ್ಕದ್ದು. |
| 7. | ಸದರಿ ವಿನ್ಯಾಸದಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ತೆರೆದ ಚರಂಡಿಗಳನ್ನು ನಿರ್ಮಿಸಿ, ಚರಂಡಿಗಳಲ್ಲಿ ಹೂಳು ಸಂಗ್ರಹವಾಗದಂತೆ ಹಾಗೂ ನೀರು ಸರಾಗವಾಗಿ ಹರಿಯುವಂತೆ ಕ್ರಮವಹಿಸುವುದು. |
| 8. | ರಾಜಕಾಲುವೆಗಳನ್ನು ಮುಚ್ಚದಂತೆ ಕ್ರಮವಹಿಸಿ, ರಾಜಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ನೋಡಿಕೊಳ್ಳತಕ್ಕದ್ದು, ಮತ್ತು ರಾಜಕಾಲುವೆಗಳನ್ನು ಅತಿಕ್ರಮಣ / ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯುವಂತೆ ಕ್ರಮವಹಿಸತಕ್ಕದ್ದು. |
| 9. | ಸದರಿ ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ವಿನ್ಯಾಸಕ್ಕೆ ಅಂತಿಮ ಅನುಮೋದನೆಯನ್ನು ಪಡೆಯುವ ಸಂಬಂಧ ಸದರಿ ವಿನ್ಯಾಸದಲ್ಲಿ ಕಾಯ್ದಿರಿಸಿರುವ ರಸ್ತೆಗಳು ಹಾಗೂ ಉದ್ಯಾನವನಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ಮತ್ತು ನಾಗರೀಕ ಸೌಲಭ್ಯ ನಿವೇಶನಗಳನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲು ಕ್ರಮ ಜರುಗಿಸತಕ್ಕದ್ದು. ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಪ್ರಮಾಣ ಪತ್ರಗಳೊಂದಿಗೆ ಅಂತಿಮ ಅನುಮೋದನೆಗೆ ಮನವಿ ಸಲ್ಲಿಸಿದ ನಂತರ ಪರಿಶೀಲಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/24/ಶಾಸನ/2015, ದಿನಾಂಕ:10-09-2015 ರಂತೆ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ವಿನ್ಯಾಸದ ಶೇಕಡ 100 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗುವುದು. |
| 10. | ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಸ್ಥಳೀಯ ಸಂಸ್ಥೆ ಕಾಯ್ದೆಯಡಿ ಸಂಬಂಧಿತ ಗ್ರಾಮ ಪಂಚಾಯಿತಿ ವತಿಯಿಂದ ಪರವಾನಗಿ ಪಡೆಯತಕ್ಕದ್ದು. |
| 11. | ಈ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಈ ವಸತಿ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಟ ಬಳಕೆಗೆ ಮಾತ್ರ ಉಪಯೋಗಿಸತಕ್ಕದ್ದು. |

| | |
|---|---|
| 12. | ಈ ವಿನ್ಯಾಸದಲ್ಲಿ ಇರುವಂತಹ 'ಬಿ' ಖರಾಬು ಜಾಗಗಳು ಸರ್ಕಾರಕ್ಕೆ ಸೇರಿದವುಗಳಾಗಿದ್ದು, ಈ ಜಾಗಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಇವುಗಳನ್ನು ಅತಿಕ್ರಮಣ ಮಾಡತಕ್ಕದ್ದಲ್ಲ. |
| 13. | ಈ ಅನುಮೋದಿತ ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. |
| 14. | ಈ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಈ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆಗಳು, ಸಾರ್ವಜನಿಕ ರಸ್ತೆಗಳಾಗಿದ್ದು ಇವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮಾತ್ರ ಇರಿಸತಕ್ಕದ್ದು. ಈ ರಸ್ತೆಗಳಿಗೆ ಅಡ್ಡಲಾಗಿ ತಡೆಗೋಡೆಯನ್ನು ನಿರ್ಮಿಸತಕ್ಕದ್ದಲ್ಲ ಹಾಗೂ ಈ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ. |
| 15. | ಈ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳು ಸಾರ್ವಜನಿಕ ಸ್ವತ್ತಾಗಿರುತ್ತವೆ. ಆದ್ದರಿಂದ, ಈ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು. |
| 16. | ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಲುವಾಗಿ ಉಪಯೋಗಿಸಲು ಬರುವುದಿಲ್ಲ ಹಾಗೂ ಈ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ. |
| 17. | ಪ್ರಸ್ತಾವಿತ ಜಮೀನುಗಳು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ, ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ. |
| 18. | ಒಂದು ವೇಳೆ ಸರ್ಕಾರವು ಪೂರ್ವಾನ್ವಯವಾಗುವಂತೆ ನಿಗದಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು. |
| 19. | ಅನುಮೋದಿತ ವಿನ್ಯಾಸದಲ್ಲಿ ಮಳೆನೀರು ಸಂಗ್ರಹಣಾ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಹಾಗೂ ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. |
| 20. | ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 209 ಬಿಎಂಆರ್ 2016.ದಿನಾಂಕ : 31.03.2017 ರ ರೀತ್ಯಾ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು. |

M-viny-lao iss

18/03

| | |
|---|---|
| 21. | ಈ ವಿನ್ಯಾಸ ನಕ್ಷೆಯ ಅನುಮೋದನೆಯ ಸಲುವಾಗಿ ಸಲ್ಲಿಸಲಾಗಿರುವ ಭೂ ಮಾಲೀಕತ್ವದ ದಾಖಲೆಗಳು, ಸರ್ವೆಸ್ಕೆಚ್ ಮತ್ತು ಇತರ ಯಾವುದೇ ದಾಖಲಾತಿಗಳು/ ಮಾಹಿತಿಗಳು ತಪ್ಪು/ ಸುಳ್ಳು / ಪೋರ್ಜರಿಯಾಗಿದ್ದಲ್ಲಿ ಅಥವಾ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆ ಇಲ್ಲದೇ ಈ ವಿನ್ಯಾಸ ನಕ್ಷೆಯನ್ನು ರದ್ದು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ. |

ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ-ಕಾರ್ಯದರ್ಶಿ
ನೆಲಮಂಗಲ ಯೋಜನಾ ಪ್ರಾಧಿಕಾರ
ನೆಲಮಂಗಲ

ಪ್ರತಿಯನ್ನು:

1. ಅರ್ಜಿದಾರರಾದ ಶ್ರೀಮತಿ ಲಕ್ಷ್ಮಮ್ಮ, ಕೋಂ ಲೇಟ್ ಮುತ್ತಣ್ಣ, ನಂ.7841, 9ನೇ ಅಡ್ಡರಸ್ತೆ, ಥಾಮಸ್ ಸ್ಕೂಲ್ ಹತ್ತಿರ, ಮಾರುತಿ ಲೇಔಟ್, ಎಂ.ಜಿ.ರೋಡ್, ನೆಲಮಂಗಲ . ಅವರ ಮಾಹಿತಿಗಾಗಿ ವಿನ್ಯಾಸದ ನಕ್ಷೆಯೊಂದಿಗೆ ಕಳುಹಿಸುತ್ತಾ, ಸದರಿ ವಿನ್ಯಾಸ ನಕ್ಷೆಯಂತೆ ರಸ್ತೆಗಳನ್ನು, ಉದ್ಯಾನವನ ಪ್ರದೇಶವನ್ನು, ನಾಗರೀಕ ಸೌಲಭ್ಯ ಪ್ರದೇಶವನ್ನು ಹಾಗೂ ನಿವೇಶನಗಳನ್ನು ಸ್ಥಳದಲ್ಲಿ ಯಥಾವತ್ತಾಗಿ ಅಳವಡಿಸಿ, ಬಡಾವಣೆಯನ್ನು ನಿಯಮಾನುಸಾರ ಅಭಿವೃದ್ಧಿಪಡಿಸುವಂತೆ ಈ ಮೂಲಕ ಸೂಚಿಸಲಾಗಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅರಿಶಿನಕುಂಟೆ ಗ್ರಾಮ ಪಂಚಾಯಿತಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು ಇವರಿಗೆ ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಕಛೇರಿ ಪ್ರತಿ.

M-viny-lno iss